ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	770
ವಿಧಾನ ಸಭೆ ಸದಸ್ಯರ ಹೆಸರು	ಶ್ರೀ ಎಸ್.ಎನ್.ಬೋಸ್‌ರಾಜು(ವಿಧಾನಸಭೆಯಿಂದ ಚುನಾಯಿತರಾದವರು)
ವಿಷಯ	ರಾಯಚೂರು ಜಿಲ್ಲೆಯಲ್ಲಿರುವ ಕಂದಾಯ ಗ್ರಾಮಗಳ ಬಗ್ಗೆ.
ಉತ್ತರಿಸಬೇಕಾದ ದಿನಾಂಕ	24.07.2019
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಯಚೂರು ಜಿಲ್ಲೆಯಲ್ಲಿರುವ ಕ್ಯಾಂಪ್, ತಾಂಡಾ, ಗೊಲ್ಲರಹಟ್ಟಿ ಇವುಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಇಲ್ಲಿಯವರೆಗೂ ಪರಿವರ್ತಿಸಲಾಗಿರುವ ಕಂದಾಯ ಗ್ರಾಮಗಳು ಎಷ್ಟು?	ರಾಜ್ಯದಲ್ಲಿರುವ ಕ್ಯಾಂಪ್, ತಾಂಡ, ಗೊಲ್ಲರಹಟ್ಟಿ, ಹಾಡಿ, ಮಜರೆ ಇತ್ಯಾದಿ ದಾಖಲೆರಹಿತ ಜನವಸತಿಗಳನ್ನು ಕಂದಾಯ ಗ್ರಾಮಗಳಾಗಿ ಅಥವಾ ಗ್ರಾಮದ ಭಾಗವಾಗಿ ಪರಿವರ್ತಿಸಲು ಸರ್ಕಾರವು ದಿನಾಂಕ 01.03.2016 ರಂದು ಸಮಗ್ರ ಮಾರ್ಗಸೂಚಿಯುಳ್ಳ ಆದೇಶವನ್ನು ಹೊರಡಿಸಿದೆ. ಅದರ ಪ್ರಕಾರ 50 ಮನೆ ಅಥವಾ 250 ಜನಸಂಖ್ಯೆಯುಳ್ಳ ದಾಖಲೆರಹಿತ ಜನವಸತಿಗಳನ್ನು ಸ್ವತಂತ್ರ ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಮೊದಲ ಹಂತದಲ್ಲಿ ಕ್ರಮ ಕೈಗೊಳ್ಳಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಕಂಧಾಯ ಗ್ರಾಮಗಳಾಗಿ ಪರಿವರ್ತಿಸಲು ಅರ್ಹವಾಗುವ 87 ದಾಖಲೆರಹಿತ ಜನವಸತಿಗಳನ್ನು ಗುರುತಿಸಲಾಗಿದೆ. ಈ ಪೈಕಿ 02 ಪ್ರಕರಣಗಳಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಉಳಿದ ಪ್ರಕರಣಗಳಿಗೆ ಪ್ರಾಥಮಿಕ ಅಧಿಸೂಚನೆಗಾಗಿ ಪ್ರಸ್ತಾವನೆಗಳು ಜಿಲ್ಲಾಧಿಕಾರಿಗಳಿಂದ ಬರಬೇಕಾಗಿರುತ್ತದೆ. ಹೀಗಾಗಿ ರಾಯಚೂರು ಜಿಲ್ಲೆಯಲ್ಲಿ ಇದುವರೆವಿಗೆ ಯಾವುದೇ ಜನವಸತಿಗಳೂ ಕಂದಾಯ ಗ್ರಾಮಗಳಾಗಿ ಪರಿವರ್ತನೆಗೊಂಡಿರುವುದಿಲ್ಲ.
ಆ)	ರಾಯಚೂರು ಜಿಲ್ಲೆಯಲ್ಲಿರುವ ಉಪನೊಂದಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನ;	ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದಿಲ್ಲ.
ಇ)	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕು /ಪಟ್ಟಣದಲ್ಲಿ ಉಪನೊಂದಣಾಧಿಕಾರಿಗಳ ಕಟ್ಟಡವು ಶಿಥಲ ವ್ಯವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನೂತನ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಇಲ್ಲ, ಅನ್ವಯಿಸುವುದಿಲ್ಲ.

ಈ)	ಲಿಂಗಸುಗೂರು ತಾಲ್ಲೂಕಿನ ಮುದಗಲ್ಲು ಪಟ್ಟಣದಲ್ಲಿ ನೂತನ ನಾಡಕಛೇರಿ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?	ಲಿಂಗಸುಗೂರು ತಾಲ್ಲೂಕಿನ ಮುದಗಲ್ ನಾಡಕಛೇರಿಯು ತಾತ್ಕಾಲಿಕವಾಗಿ ಪುರಸಭೆ ಮುದಗಲ್ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸದರಿ ಮುದುಗಲ್ ಪಟ್ಟಣದಲ್ಲಿ ಹೊಸದಾಗಿ ನಾಡಕಛೇರಿ ಕಟ್ಟಡ ನಿರ್ಮಾಣ ಮಾಡಲು ಸರ್ಕಾರಿ ಜಾಗ ಲಭ್ಯವಿರುವುದಿಲ್ಲ

ಆರ್‌ಡಿ/2 ಸಿಸಿಆರ್‌ವಿ 2019

(ಆರ್.ವಿ ದೇಶಪಾಂಡೆ)
ಕಂದಾಯ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು